**<u>ಮ.ಅ ಸಂಖ್ಯೆ 2 ರ ಮೇಲಿನ ಆದೇಶ</u>**

ವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು.

ವಾದಿಯು ಮ.ಅ ಸಂಖ್ಯೆ 2 ನ್ನು ಸಿಪಿಸಿ ಆದೇಶ 6 ನಿಯಮ 17 ಅಡಿಯಲ್ಲಿ ಸಲ್ಲಿಸಿ ತನ್ನ ವಾದ ಪತ್ರಕ್ಕೆ ಅರ್ಜಿಯಲ್ಲಿ ಕೋರಿದಂತೆ ತಿದ್ದುಪಡಿ ಮಾಡಲು ಪರವಾನಿಗೆ ಕೋರಿರುತ್ತಾರೆ. ಈ ದಾವೆಯನ್ನು ವಾದಿಯು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಘೋಷಣೆ, ಸ್ವಾಧೀನಾನುಭವ ಹಾಗೂ ನಿರ್ಬಂಧಕಾಜ್ಞೆಯನ್ನು ಕೋರಿ ದಾಖಲಿಸಿರುತ್ತಾರೆ. ಸಾಕಷ್ಟು ಕಾಲಾವಕಾಶ ನೀಡಿದ ತರುವಾಯುವು ಪ್ರತಿವಾದಿಯರು ತಮ್ಮ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಸದರಿ ಅರ್ಜಿಯಲ್ಲಿ ಪ್ರತಿವಾದಿಯರು 1ನೇ ದಾವಾ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ಅನಧಿಕೃತವಾಗಿ ಕಟ್ಟಡವನ್ನು ಕಟ್ಟಿರುತ್ತಾರೆ. ವಾದಿಯು ಆ ಬಗ್ಗೆ ವಿಚಾರಿಸಲಾಗಿ ಪ್ರತಿವಾದಿಯರು ಯಾವುದೇ ಸೂಕ್ತ ಉತ್ತರವನ್ನು ನೀಡಿರುವುದಿಲ್ಲ. ಹಾಗಾಗಿ ತಾನು ಉದ್ದೇಶಿತ ತಿದ್ದುಪಡಿಯ ಮೂಲಕ ಸದರಿ ಕಟ್ಟಡವನ್ನು ತೆರವುಗೊಳಿಸಲು ನ್ಯಾಯಾಲಯದ ಆದೇಶವನ್ನು ಕೋರಿ ತನ್ನ ವಾದ ಪತ್ರಕ್ಕೆ ತಿದ್ದುಪಡಿ ಮಾಡಬೇಕಾಗಿರುತ್ತದೆಂದು ಹೇಳಿರುತ್ತಾರೆ. ಸದರಿ ಅಂಶವನ್ನು ಹಾಗೂ ದಾವೆಯ ಸ್ವರೂಪವನ್ನು ಗಮನದಲ್ಲಿ ಇರಿಸಿ ಸದರಿ ಅರ್ಜಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ಹೇಳಿದ ಕಾರಣಗಳಿಗಾಗಿ ಹಾಗೂ ನ್ಯಾಯದ ಹಿತದೃಷ್ಟಿಯಿಂದ ಪುರಸ್ಕರಿಸಲಾಯಿತು.

ವಾದಿಗೆ ಈ ಮೂಲಕ ತನ್ನ ವಾದ ಪತ್ರವನ್ನು ಮ.ಅ 2 ರಲ್ಲಿ ಕೋರಿದಂತೆ ಕಚೇರಿ ಮುಖ್ಯಸ್ಥರ ಮುಂದೆ ತಿದ್ದುಪಡಿ ಮಾಡಲು ಸೂಚಿಸಲಾಯಿತು.

ತಿದ್ದುಪಡಿ ವಾದಪತ್ರಕ್ಕಾಗಿ
Call On 29.11.2019.

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಕನಕಪುರ.**